
ಶ್ರೀ.
ರಾಜು
...ರನ್ನು ಭೇಟಿ ಮಾಡಿ
ಒಂದು ಸಮೃದ್ಧ ಗ್ರಾಮದ ಕಥೆ. . .
Part-1

ಇದು ರಾಂಪುರ ಎನ್ನುವ ಒಂದು ಸಣ್ಣ ಭಾರತೀಯ ಗ್ರಾಮದ ಕಥೆ, ಅದು ಅನೇಕ ದಶಕಗಳಿಂದ, ಮುಖ್ಯವಾಗಿ ಗ್ರಾಮಸ್ಥರ ಅತೀವ ಅಜ್ಞಾನ ಮತ್ತು ಮೂಢನಂಬಿಕೆಗಳ ಕಾರಣದಿಂದಾಗಿ ಯಾವುದೇ ಅಭಿವೃದ್ಧಿಯನ್ನು ಹೊಂದಿರಲಿಲ್ಲ. ಆದರೆ, ಒಂದು ದಿನ ಹೇಗೆ ಬಂದಿತು ಎಂದರೆ, ಅದೇ ಗ್ರಾಮದ ಒಬ್ಬ ಯುವ ಬಾಲಕನು, ವರ್ಷಗಳಿಂದ ಇದ್ದ ಅಜ್ಞಾನ ಮತ್ತು ಅಪನಂಬಿಕೆಯನ್ನು ಹೋಗಲಾಡಿಸಿ, ಗ್ರಾಮಸ್ಥರ ಕಣ್ಣು ತೆರೆಸಿದ. ಇಷ್ಟೇ ಅಲ್ಲದೇ, ಅವರಿಗೆ ಗ್ರಾಮದ ಅಭಿವೃದ್ಧಿಯ ಬಗ್ಗೆ, ಎಂತಹ ದಾರಿ ತೋರಿದನೆಂದರೆ. ಕೆಲವೇ ವರ್ಷಗಳಲ್ಲಿ ಆ ಗ್ರಾಮವು ಅದ್ಭುತ ಪ್ರಗತಿಯನ್ನು ಸಾಧಿಸಿತು ಹಾಗೂ ಇತರ ಗ್ರಾಮಗಳಿಗೆ ಮಾದರಿಯಾಯಿತು. ಇದು ಹೇಗೆ ನಡೆಯಿತು ಎಂದು ತಿಳಿದುಕೊಳ್ಳಬೇಕೇ?

ಈ ಕ್ರಾಂತಿಕಾರಿ ಪರಿವರ್ತನೆಯು ಹೇಗೆ ಜರುಗಿತು ಮತ್ತು ಗ್ರಾಮದ ಅದೃಷ್ಟ ಹೇಗೆ ಬದಲಾಯಿತು ಎಂದು ತಿಳಿಯಲು ಬನ್ನಿ ಮತ್ತು ಸಂವೇದಿಸಿ.




ಗ್ರಾಮ ಮುಖ್ಯಸ್ಥರೊಡನೆ ಕೆಲವು ಮಂದಿ ಮಾತನಾಡುತ್ತಿದ್ದಾರೆ
ಇದ್ದಕ್ಕಿದ್ದಂತೆ, ಜನರ ಒಂದು ಗುಂಪು ಮುಖ್ಯಸ್ಥರ ದಿಕ್ಕಿನಲ್ಲಿ ಓಡಿಬರುತ್ತಿದೆ
ಮುಖಿಯಾ : ನಮಸ್ಕಾರ ಮಿತ್ರರೇ !
ಜನರ ಗುಂಪು : ನಮಸ್ಕಾರ , ಮುಖಿಯಾ ಜಿ. . .
ಮುಖಿಯಾ : ಓ! ರಾಜು .. ಪಾರ್ವತಿ... ವೆಂಕಿ... ಮಿಸ್ರಿ, ಬನ್ನಿ, ಕುಳಿತುಕೊಳ್ಳಿ. ನೀವೆಲ್ಲರೂ ಬಂದ ಕಾರಣವೇನು?
ರಾಜು : ಮುಖ್ಯಸ್ಥರೆ, ನಮ್ಮ ಗ್ರಾಮದ ಬಳಿ ಒಂದು ಪರಮಾಣು ಶಕ್ತಿ ಸ್ಥಾವರವನ್ನು ಸ್ಥಾಪಿಸಲಾಗುತ್ತದೆ ಎಂದು ನಮಗೆ ತಿಳಿದುಬಂತು. ಅದು ನಿಜವೇ?



ಮುಖಿಯಾ : ಹೌದು, ನಾನು ಸಹಾ ಅದರ ಬಗ್ಗೆ ಕೇಳಿದ್ದೇನೆ. ಆದರೆ, ನೀವೆಲ್ಲಾ ಇಷ್ಟು ಚಿಂತಿತರಾಗಿ ಏಕೆ ಕಾಣುತ್ತಿದ್ದೀರಿ. ಇದು ನಮ್ಮ ಹಳ್ಳಿಗೆ ಒಳ್ಳೆಯದರಂತೆ ಕಾಣುತ್ತಿದೆ
ಪಾರ್ವತಿ : ನೀವು ಏನು ಹೇಳುತ್ತಿದ್ದೀರಿ ಮುಖ್ಯಸ್ಥರೆ? ಈ ಶಕ್ತಿ ಸ್ಥಾವರಗಳು ಪರಿಸರಕ್ಕೆ ಬಹಳ ವಿಕಿರಣವನ್ನು ಬಿಡುಗಡೆ ಮಾಡುತ್ತವೆ ಎಂದು ನಾವು ಕೇಳಿದ್ದೇವೆ, ಅದು ನಮ್ಮನ್ನು ಕೊಲ್ಲಬಹುದು. ನಮ್ಮ ಜಾನುವಾರುಗಳು ಮತ್ತು ಮಕ್ಕಳು ವಿಕಲಾಂಗರಾಗಿ ಹುಟ್ಟಬಹುದು.
ಮುಖಿಯಾ : (ನಗುತ್ತಾರೆ...) ಪಾರ್ವತಿ, ನೀನು ಅತೀವವಾಗಿ ಪ್ರತಿಕ್ರಿಯೆ ನೀಡುತ್ತಿದ್ದೀಯೆಂದು ನನಗೆ ಅನ್ನಿಸುತ್ತಿದೆ. ಆ ರೀತಿ ಆಗಿದ್ದರೆ, ಪರಮಾಣು ಸ್ಥಾವರಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲರೂ, ಬಹಳ ಸಮಯದ ಮೊದಲೇ ಸತ್ತು ಹೋಗಿರುತ್ತಿದ್ದರು. ಆದುದರಿಂದ, ಅದು ಸರಿಯಲ್ಲ.
ಮುಖಿಯಾ : ನಾವು ಗಾಬರಿಗೊಳ್ಳಬೇಕಿಲ್ಲ
(ಜನರು ಪರಸ್ಪರ ಮುಖ ನೋಡುತ್ತಾರೆ...)
ಮುಖಿಯಾ : ಸರಿ, ಈಗ ನನಗೆ ಒಂದು ವಿಷಯ ಹೇಳಿ... ನಾವು ಪೂಜಿಸುವ ಸೂರ್ಯ ದೇವರು ವಿಕಿರಣದ ಮೂಲ ಎಂದು ನಿಮಗೆ ತಿಳಿದಿದೆಯೇ? ನಾವು ಬಾಳುವ ಮನೆಗಳು ಸಹಾ ನಿರಂತರವಾಗಿ ವಿಕಿರಣವನ್ನು ಸೂಸುತ್ತಿರುತ್ತವೆ. ನೀವು ತಿನ್ನುವ ಮತ್ತು ಕುಡಿಯುವ ವಸ್ತುಗಳಲ್ಲಿ ಸಹಾ ಅತ್ಯಂತ ಸೂಕ್ಷ್ಮ ಪ್ರಮಾಣದಲ್ಲಿ ವಿಕಿರಣ ಇದ್ದೇ ಇರುತ್ತದೆ. ಓವಿಗ್ ಟಿವಿಗಳು, ರೇಡಿಯೋಗಳು ಮತ್ತು ನಿಮ್ಮ ಮೊಬೈಲ್ ಸಹಾ-ಅವೆಲ್ಲವೂ ವಿಕಿರಣಕ್ಕೆ ಕಾಣಿಕೆ ನೀಡುತ್ತವೆ (ಎಲ್ಲರೂ ಮೌನವಾಗಿ ಆಲಿಸುತ್ತಾರೆ)




ಮುಖಿಯಾ : (ಮುಖ್ಯಸ್ಥ ಶೇಖರ ನತ್ತ ಕೈ ತೋರುತ್ತಾ...) ಈತನನ್ನು ನೋಡಿ ! ನೀವು ಈತನನ್ನು ಗುರುತಿಸಬಲ್ಲಿರಾ? ಇವನು ನನ್ನ ಮೊಮ್ಮಗ ಶೇಖರ. ಅವನು ಈಗ ತಾನೇ ನಗರದಿಂದ ಬಂದಿದ್ದಾನೆ. ಇನ್ನು ಮುಂದೆ ವಿಜಯ ವಿವರಿಸುತ್ತಾನೆ.
ಎಲ್ಲಾ ಕಣ್ಣುಗಳು ಶೇಖರನತ್ತ ತಿರುಗುತ್ತವೆ
ಶೇಖರ : ಎಲ್ಲರಿಗೂ ನನ್ನ ಆತ್ಮೀಯ ವಂದನೆಗಳು !
ಶೇಖರ : ಪಾರ್ವತಿ ಆಂಟಿ, ನಿಮಗೆ ನನ್ನ ಗುರುತು ಸಿಕ್ಕಿತಾ ?
ಪಾರ್ವತಿ : ( ಶೇಖರ ನತ್ತ ನೋಡುವಾಗ ಮುಗುಳ್ನಗುತ್ತಾಳೆ. . ) ಓ! ಶೇಖರ ... ದೇವರೇ ! ನಮಗೆ ತಿಳಿದಿದ್ದ ಹುಡುಗನಿಂದ ...ಈಗ ನೀನೊಬ್ಬ ಯುವಕನಾಗಿದ್ದೀಯ.
ಶೇಖರ : ಹೌದು, ವಿಕಿರಣವನ್ನು ಕುರಿತು ಅಜ್ಜನ ಅಭಿಪ್ರಾಯಗಳು ಸರಿಯಾಗಿವೆ. ನಾನು ನಿಮಗೆ ಆದರ ಬಗ್ಗೆ ಇನ್ನೂ ಹೆಚ್ಚು ಹೇಳಲಿದ್ದೇನೆ. ವಾಸ್ತವವಾಗಿ ವಿಕಿರಣ ಎನ್ನುವುದು ಎಲ್ಲೆಡೆ ಇರುವ ಒಂದು ವಿಧವಾದ ಶಕ್ತಿ... ನಿಜ ಹೇಳಬೇಕೆಂದರೆ ವಿಕಿರಣವು ನಮ್ಮ ಜೀವನದ ಒಂದು ಭಾಗ... ಒಂದು ಪರಮಾಣು ಶಕ್ತಿ ಸ್ಥಾವರದ ವಿಷಯದಲ್ಲಿ ಹೇಳಬೇಕೆಂದರೆ, ಆದರಿಂದ ಹೊರಬರುವ ವಿಕಿರಣ, ಅತಿ ಕಡಿಮೆ, ಎಂದರೆ ಇಲ್ಲದಷ್ಟು ಸಮಾನ. ನಿಮಗೆ ಅರ್ಥವಾಗಿದೆ ಎಂದು ಆಶಿಸುತ್ತೇನೆ...



ನನಗೆ ಒಂದು ವಿಷಯ ಹೇಳಿ... ನಿಮ್ಮಲ್ಲಿ ಎಷ್ಟು ಮಂದಿ ಎಂದಾದರೂ ಎದೆಯ ಕ್ಷ-ಕಿರಣ ಮಾಡಿಸಿಕೊಂಡಿದ್ದೀರಿ?
(3-4 ಮಂದಿ ಕೈ ಎತ್ತುತ್ತಾರೆ)
ಶೇಖರ : ಒಂದು ಸಾರಿ ಕ್ಷ-ಕಿರಣದಿಂದ ನಮ್ಮ ದೇಹಕ್ಕೆ ತಗುಲುವ ವಿಕಿರಣ, ಸುಮಾರು, 20 ವರ್ಷಗಳಿಂದ ಪರಮಾಣು ಸ್ಥಾವರದಲ್ಲಿ ಕೆಲಸ ಮಾಡುವುದಕ್ಕೆ ಅಥವಾ ಅವರ ಸುತ್ತ-ಮುತ್ತ ಇರುವುದಕ್ಕೆ ಸರಿಸಮಾನವಾದುದು ಎಂದು ನಿಮಗೆ ತಿಳಿದಿದೆಯೇ?
ಎಲ್ಲರೂ : ಹೌದಾ ? (ಎಲ್ಲರೂ ಆಶ್ಚರ್ಯ ಚಕಿತರಾಗಿದ್ದಾರೆ)
ಮಿಸ್ರಿ : ಆದರೆ, ಮಗಾ , ಪರಮಾಣು ಸ್ಥಾವರದಲ್ಲಿ ಕೆಲಸ ಮಾಡುತ್ತಿರುವವರು ಮತ್ತು ಆದರ ಸುತ್ತಮುತ್ತ ವಾಸಿಸುತ್ತಿರುವವರು ಅತಿಯಾದ ಅಪಾಯ ಹೊಂದಿರುತ್ತಾರೆ ಮತ್ತು ಅನೇಕ ವಿಧವಾದ ಕ್ಯಾನ್ಸರ್ ಪಡೆಯುವ ಸಾಧ್ಯತೆ ಇದೆ ಎಂದು ನಾವು ಕೇಳಿದ್ದೇವೆ.
ಶೇಖರ : (ಮಿಸ್ರಿ ಆಂಟಿ, ನಿಮ್ಮ ಮಾಹಿತಿ ಸರಿಯಲ್ಲ, ಒಂದು ಪರಮಾಣು ಸ್ಥಾವರದಲ್ಲಿ ಕೆಲಸ ಮಾಡುವುದು ಮತ್ತು ಆದರ ಸುತ್ತಮುತ್ತ ವಾಸಿಸುವುದು ಕ್ಯಾನ್ಸರ್ ಉಂಟುಮಾಡುವುದಿಲ್ಲ, ಆದು ಆ ರೀತಿ ಇದ್ದರೆ, ಅಲ್ಲಿ ಕೆಲಸ ಮಾಡಲು ಯಾರೂ ಬಯಸುತ್ತಿರಲಿಲ್ಲ.


ಶೇಖರ : ಆಂಟಿ, ನಿಮಗೆ ನೆನಪಿದ್ದರೆ, ನಮ್ಮ ಹಳ್ಳಿಯ 4 ಮಂದಿ ಕಳೆದ ವರ್ಷ ಬಾಯಿ ಕ್ಯಾನ್ಸರ್‌ನಿಂದ ಮರಣ ಹೊಂದಿದರು–ಅದಕ್ಕೆ ಕಾರಣ ಅವರು ತಂಬಾಕು ಜಗಿಯುತ್ತಿದ್ದರು.
ಶೇಖರ : ಸುರಕ್ಷಿತವಾದ ಉಪಕರಣಗಳು, ಪರಿಕರಗಳು ಮತ್ತು ಉಡುಗೆಗಳ ಸಹಾಯದಿಂದ ಮತ್ತು ಪ್ರಾಥಮಿಕವಾಗಿ ಪರಮಾಣು ಸ್ಥಾವರಗಳ ಅತ್ಯಂತ ಸುರಕ್ಷಿತ ವಿನ್ಯಾಸ ಮತ್ತು ಕಾರ್ಯಾಚರಣೆಯಿಂದಾಗಿ, ಅಲ್ಲಿ ದಶಕಗಳ ಕಾಲ ಕೆಲಸ ಮಾಡಿದರೂ ಸಹಾ, ಜನರು ವಿಕಿರಣಕ್ಕೆ ಒಡ್ಡಲ್ಪಡುವುದಿಲ್ಲ.
ಶೇಖರ : ನಿಜ ಹೇಳಬೇಕೆಂದರೆ, ವಿಕಿರಣವನ್ನು ಉಪಯೋಗಿಸಿ ಸಿಟಿಸ್ಕ್ಯಾನ್ ಮತ್ತು ಎಂಆರ್‌ಐನಂತಹ ಉಪಕರಣಗಳ ಮೂಲಕ, ಕ್ಯಾನ್ಸರ್ ರೋಗವನ್ನು ಪತ್ತೆ ಹಚ್ಚುವುದು ಮತ್ತು ಚಿಕಿತ್ಸೆಯನ್ನು ನೀಡಲಾಗುತ್ತದೆ.
ಪಾರ್ವತಿ : ಆದರೆ, ಶೇಖರ, ನಾನು ಸವಿತಾ ಆಂಟಿಯನ್ನು ನೆನ್ನೆ ಬೇಟಿ ಮಾಡಿದೆ. ಒಂದು ಪರಮಾಣು ಸ್ಥಾವರದ ಸುತ್ತಮುತ್ತ ಕೆಲಸ ಮಾಡುವುದರಿಂದ, ಮಹಿಳೆಯರು ತಾಯಿಯಾಗಲು ಸಾಧ್ಯವಿಲ್ಲ, ಗರ್ಭ ಧರಿಸುವುದು ಅಸಾಧ್ಯ ಎಂದು ಅವಳು ಹೇಳಿದಳು.
ಶೇಖರ : (ಮುಗುಳ್ನಗುತ್ತಾನೆ), ಪಾರ್ವತಿ ಆಂಟಿ, ಸವಿತಾ ಆಂಟಿಗೆ ವಿಕಿರಣದ ಬಗ್ಗೆ ಅಪಾರ್ಥಕರ ಅಭಿಪ್ರಾಯವಿದೆ. ಆದು ಬರೀ ಗಾಳಿಸುದ್ದಿ ಮಾತ್ರ, ಆದರಲ್ಲಿ ಯಾವುದೇ ಅರ್ಥವಿಲ್ಲ, ರಾಜು ಅಂಕಲ್, ನಿಮಗೆ ನೆನಪಿದ್ದರೆ, ಕಳೆದ ವರ್ಷ ನಮ್ಮ ರಾವ್‌ನರೇಶನ ಮಗ ಸರಯು, ಸೋಂಕು ತಗುಲಿದ್ದ ಸೂಚಿಯನ್ನು ಬಳಸುವುದರಿಂದ ಮರಣ ಹೊಂದಿದ.


ಶೇಖರ : ಆದರೆ, ಒಂದು ಸೂಕ್ತ ಪ್ರಮಾಣದ ವಿಕಿರಣದೊಡನೆ ಸಿರಿಂಜನ್ನು ಸ್ಟೆರಿಲೈಸ್ ಮಾಡಿದ್ದರೆ ಅದು ಸೋಂಕನ್ನು ತಡೆಗಟ್ಟುತ್ತಿತ್ತು. ಈ ರೀತಿಯಾಗಿ ವಿಕಿರಣವನ್ನು ವೈದ್ಯಕೀಯ ಕ್ಷೇತ್ರದಲ್ಲಿ ಬಳಸಿದಾಗ ಅದು ಜೀವ ಉಳಿಸುತ್ತದೆ, ಮತ್ತು ಅದು ಮಾನವರನ್ನು ಮತ್ತು ಪ್ರಾಣಿಗಳನ್ನು ಸೋಂಕಿನಿಂದ ಸಂರಕ್ಷಿಸುತ್ತದೆ.
ರಾಜು : ಆದರೆ ಶೇಖರ... ನಮ್ಮ ಹಳ್ಳಿಯಲ್ಲಿ ಪರಮಾಣು ಶಕ್ತಿ ಸ್ಥಾವರ ಏಕೆ? ಇಲ್ಲಿ ವಿಶೇಷವೇನು? ನಾವು ಇತರ ವಿಧಾನಗಳಿಂದ ವಿದ್ಯುಚ್ಛಕ್ತಿ ಪಡೆಯಬಹುದಲ್ಲ? ಪರಮಾಣು ಶಕ್ತಿ ಸ್ಥಾವರವು ನಮ್ಮ ಮಾವಿನ ತೋಪು, ಕೃಷಿ ಭೂಮಿ, ಬೆಳೆಗಳು ಮತ್ತು ಮೀನಿಗಾರಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಕೇಳಿದ್ದೇವಲ್ಲಾ?
ಶೇಖರ : ಒಳ್ಳೆಯ ಪ್ರಶ್ನೆ, ಬುಧಿಯಾ ಅಂಕಲ್ ! ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಇತರ ವಿಧಾನಗಳು ಮತ್ತು ಪರ್ಯಾಯಗಳು ಇದ್ದರೂ ಸಹಾ, ಪರಮಾಣು ಶಕ್ತಿ ಸ್ಥಾವರದಿಂದ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯು ಸ್ವಚ್ಛ, ಹಸಿರು ಮತ್ತು ಮಿತವ್ಯಯಕರವಾಗಿದೆ ಮತ್ತು ಅದು ವಾಸ್ತವದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟುತ್ತದೆ. ಆದುದರಿಂದ ನಿಮ್ಮ ಎಲ್ಲ ಬೆಳೆಗಳು, ತೋಟಗಳು ಮತ್ತು ಮೀನುಗಳ ಮೇಲೆ ಪರಿಣಾಮ ಬೀರುವುದಿಲ್ಲ, ಅದು ಮಾಲಿನ್ಯ-ರಹಿತ ಮತ್ತು ಸುರಕ್ಷಿತವಾಗಿದೆ.
ಶೇಖರ :ಪರ್ಯಾಯವಾಗಿ ಹೇಳಬೇಕೆಂದರೆ, ಕಲ್ಲಿದ್ದಲು ಮತ್ತು ಇತರ ಸಂಪನ್ಮೂಲಗಳಿಂದ ಉತ್ಪನ್ನಗೊಂಡ ವಿದ್ಯುಚ್ಛಕ್ತಿಯು ಗಮನಾರ್ಹವಾಗಿ ಪರಿಸರ ವಿನಾಶಕ್ಕೆ ಎಡೆ ಮಾಡುತ್ತದೆ. ನಿಜವಾಗಿಯೂ ಬಹಳಷ್ಟು ವಿಷಕಾರಿ ಅನಿಲಗಳು ಉತ್ಪನ್ನಗೊಳ್ಳುತ್ತವೆ.
ಅಷ್ಟು ಮಾತ್ರವಲ್ಲದೇ, ನಾನು ನಿಮಗೆ ಇನ್ನೂ ಹೆಚ್ಚು ಆಸಕ್ತಿಕರ ಸತ್ಯಗಳನ್ನು ಹೇಳಲಿದ್ದೇನೆ. ಆಹಾರ ವಿಕಿರಣ ತಾಂತ್ರಿಕತೆಗಳೊಡನೆ ನಾವು ಹಣ್ಣುಗಳು ಮತ್ತು ತರಕಾರಿಗಳು ಅವಧಿಗೆ ಮೊದಲು ಕೊಳೆತುಹೋಗುವುದನ್ನು ತಡೆಗಟ್ಟಬಹುದು ಎನ್ನುವುದು ನಿಮಗೆ ತಿಳಿದಿದೆಯೇ? ನಾವು ಈರುಳ್ಳಿ ಮತ್ತು ಆಲೂಗಡ್ಡೆಗಳು ಶೀಘ್ರವಾಗಿ ಮೊಳಕೆಯೊಡೆಯುವುದನ್ನು ತಡೆಗಟ್ಟಬಹುದು. ಅಲ್ಲದೇ, ನಾವು ಬೇಳೆಗಳು, ಬಟಾಣಿ, ಭತ್ತ ಇತ್ಯಾದಿ ಬೆಳೆಗಳಲ್ಲಿ ಕೀಟಗಳ ಕಾಟವನ್ನು ಬೆಳೆಯ ವಿಕಿರಣ ತಡೆಗಟ್ಟುತ್ತದೆ ಮತ್ತು ಆದರಿಂದ ಈ ಉತ್ಪನ್ನಗಳನ್ನು ಶೇಖರಿಸಿ ಇಡುವ ಅವಧಿಯು ಹೆಚ್ಚಾಗುತ್ತದೆ. ಅಷ್ಟು ಮಾತ್ರವಲ್ಲದೇ ಅದು ನಿಮ್ಮ ಬೀಜಗಳ ಉತ್ಪಾದಕತೆಯನ್ನು ಸಹಾ ವರ್ಧಿಸುತ್ತದೆ.


ಶೇಖರ : ಅಂಕಲ್, ಮತ್ತೊಂದು ವಿಷಯವಿದೆ... ನಾವು ವಿದ್ಯುಚ್ಛಕ್ತಿಯನ್ನು ಇತರ ವಿಧಾನಗಳಲ್ಲಿ ಉತ್ಪಾದಿಸುವುದರ ಬಗ್ಗೆ ಮಾತನಾಡುತ್ತಿದ್ದೇವೆ. ಮೊದಲಿಗೆ ನಾವು ಅರ್ಥ ಮಾಡಿಕೊಳ್ಳಬೇಕಾದುದೆಂದರೆ ತೈಲ, ಅನಿಲ ಇತ್ಯಾದಿಗಳ ಕೊರತೆ ಇದೆ, ಆದರೆ ನಮ್ಮ ಬಳಿ ಸಾಕಷ್ಟು ಪರಮಾಣು ಸಂಪನ್ಮೂಲವಿದೆ, ಅದನ್ನು ಬಳಸಿ ನಾವು ಅನೇಕ ವರ್ಷಗಳ ಕಾಲ ವಿದ್ಯುಚ್ಛಕ್ತಿ ಉತ್ಪಾದಿಸಬಹುದು.
ವೆಂಕಿ : ಆದರೆ, ಮಗ , ವಿದ್ಯುಚ್ಛಕ್ತಿಯನ್ನು ಸೌರ ಶಕ್ತಿ ಮತ್ತು ಗಾಳಿ ಮಿಲ್ ಬಳಸಿ ಸಹಾ ಉತ್ಪಾದಿಸಬಹುದಲ್ಲ... ಪರಮಾಣು ಶಕ್ತಿಯ ಬಗ್ಗೆ ಮಾತ್ರ ಇಷ್ಟು ಗಮನ ಏಕೆ?
ಶೇಖರ : ಎಷ್ಟು ಬುದ್ಧಿಶಾಲಿ ಪ್ರಶ್ನೆ ವೆಂಕಿ ಅಂಕಲ್ ! ನಿಸ್ಸಂಶಯವಾಗಿ ನಾವು ಸೌರಶಕ್ತಿ ಮತ್ತು ಗಾಳಿಯ ಶಕ್ತಿಯನ್ನು ಬಳಸಬಹುದು. ಆದರೆ ಆ ಎರಡೂ ಸನ್ನಿವೇಶಗಳಲ್ಲಿ ನಮಗೆ ಹೆಚ್ಚು ಸ್ಥಳಾವಕಾಶದ ಅಗತ್ಯವಿರುತ್ತದೆ. ಮತ್ತು ಬಿಸಿಲು ಇಲ್ಲದಿದ್ದಾಗ, ರಾತ್ರಿಯಲ್ಲಿ ಮತ್ತು ಮೋಡಕವಿದ ದಿನಗಳಲ್ಲಿ, ನಾವು ವಿದ್ಯುಚ್ಛಕ್ತಿಯನ್ನು ಹೇಗೆ ಉತ್ಪಾದಿಸಬಹುದು?
(ಈ ವಿಷಯಗಳು ಜನರನ್ನು ಚಿಂತನೆಗೆ ಹಚ್ಚುತ್ತವೆ...)
ಶೇಖರ : ಗಾಳಿ ಮಿಲ್‌ಗಳ ವಿಷಯಕ್ಕೆ ಬಂದಾಗ , ನಮಗೆ ಎಲ್ಲಾ ಸಮಯದಲ್ಲೂ ಸಾಕಷ್ಟು ಗಾಳಿಯ ವೇಗದ ಅಗತ್ಯವಿರುತ್ತದೆ. ಆದರೆ, ಪರಮಾಣು ಶಕ್ತಿ ಸ್ಥಾವರಕ್ಕೆ ಅದಕ್ಕಿಂತ ಬಹಳ ಕಡಿಮೆ ಸ್ಥಳದಲ್ಲಿ ಹಗಲು-ರಾತ್ರಿ ವಿದ್ಯುಚ್ಛಕ್ತಿ ಉತ್ಪಾದಿಸುವ ಸಾಮರ್ಥ್ಯವಿದೆ , ತಿಳಿಯಿತೇ? ಅಲ್ಲದೇ, ಈ ರೀತಿಯಾಗಿ ಉತ್ಪಾದಿಸಲಾದ ವಿದ್ಯುಚ್ಛಕ್ತಿ ಬಹಳ ಮಿತವ್ಯಯಕರವಾಗಿರುತ್ತದೆ.
ಪಾರ್ವತಿ : ಆದರೆ, ಸಮೀರ್ ನಾವು ಪರಮಾಣು ಶಕ್ತಿಯು ಅಪಾಯಕರ ಮತ್ತು ವಿಪತ್ತನ್ನು ಉಂಟುಮಾಡುತ್ತದೆ ಎಂದು ಕೇಳಿದ್ದೇವೆ ಮತ್ತು ತುರ್ತು ಸನ್ನಿವೇಶದಲ್ಲಿ ಅದು ಜೀವ ಮತ್ತು ಆಸ್ತಿಗಳಿಗೆ ಅಪಾರ ಹಾನಿ ಉಂಟುಮಾಡಬಹುದು.
ಶೇಖರ : ಪಾರ್ವತಿ ಆಂಟಿ, ಬೆಂಕಿಗಿಂತ ಹೆಚ್ಚು ಅಪಾಯಕರವಾದುದು ಬೇರೆ ಯಾವುದೂ ಇಲ್ಲ ಎಂದು ನಿಮಗೆ ತಿಳಿದಿರಬೇಕು. ಮಾನವನು ಎಂಟು ಲಕ್ಷ ವರ್ಷಗಳ ಹಿಂದೆ ಬೆಂಕಿಯನ್ನು ಬಳಸಲು ಪ್ರಾರಂಭಿಸಿದಂದಿನಿಂದ ಅದು ಅತ್ಯಂತ ವಿನಾಶಕರವಾಗಿದೆ... ಅನೇಕ ದಶಲಕ್ಷ ಜೀವಗಳನ್ನು ಮತ್ತು ಅವರ ಸ್ವತ್ತುಗಳನ್ನು ನಾಶಗೊಳಿಸಿದೆ... ಆದರೆ ಒಂದು ಸಣ್ಣ ಮಗು ಸಹಾ ಸುಲಭವಾಗಿ, ಯಾವುದೇ ಭಯವಿಲ್ಲದೇ ಒಂದು ಬೆಂಕಿ ಪೊಟ್ಟಣವನ್ನು ಕಿಸೆಯಲ್ಲಿ ಇರಿಸಿಕೊಂಡು ನಡೆದಾಡುತ್ತದೆ. ಏಕೆಂದು ಗೊತ್ತೇ? ಏಕೆಂದರೆ ನಾವು ಅದನ್ನು ಸುರಕ್ಷಿತವಾಗಿ ಬಳಸುವುದನ್ನು ಕಲಿತಿದ್ದೇವೆ. ಗಮನಿಸಬೇಕಾದ ಮತ್ತೊಂದು ವಿಷಯವೇನೆಂದರೆ ಬಹಳಷ್ಟು ಜನರು ರೈಲು ಮತ್ತು ವಿಮಾನ ಅಪಘಾತಗಳಲ್ಲಿ ಮರಣ ಹೊಂದುತ್ತಾರೆ. ನಾವು ರೈಲು ಅಥವಾ ವಿಮಾನದಲ್ಲಿ ಪ್ರಯಾಣ ಮಾಡುವುದನ್ನು ನಿಲ್ಲಿಸುತ್ತೇವೆಯೇ?


ಶೇಖರ : ಅಲ್ಲದೇ, ಪ್ರತಿವರ್ಷ ಸಾವಿರಾರು ಜನರು ಪ್ರವಾಹ, ಭೂಕಂಪ, ಭೂಕುಸಿತ ಮತ್ತು ದಿನನಿತ್ಯ ರಸ್ತೆ ಅಪಘಾತಗಳಲ್ಲಿ ಪ್ರಾಣ ಕಳೆದುಕೊಳ್ಳುತ್ತಾರೆ. ಆದುದರಿಂದ, ನಾವು ಈ ನಕಾರಾತ್ಮಕ ಆಲೋಚನೆಗಳನ್ನು ನಮ್ಮ ಮನಸ್ಸಿನಿಂದ ತೆಗೆದುಹಾಕಿ ಈ ಒಳ್ಳೆಯ ಕ್ರಮವನ್ನು ಸ್ವಾಗತಿಸೋಣ.
ರಾಜು : ಆದರೆ, ಶೇಖರ ನಾವು ಪರಮಾಣು ಶಕ್ತಿ ಸ್ಥಾವರದಿಂದ ಹೇಗೆ ಪ್ರಯೋಜನ ಪಡೆಯಬಹುದು? ಸಾರ್ವಜನಿಕರ ಅಭಿಪ್ರಾಯವೆಂದರೆ , ಸರ್ಕಾರವು ಹೇಗೂ ನಮ್ಮ ಜಮೀನುಗಳನ್ನು ಕಬಳಿಸಲಿದೆ. ಆದರ ನಂತರ ನಾವು ಹೇಗೆ ಬಾಳಬಹುದು?
ಶೇಖರ : ಅಂಕಲ್, ಸರ್ಕಾರವು ನಿಮ್ಮ ಜಮೀನನ್ನು ವಶಕ್ಕೆ ತೆಗೆದುಕೊಂಡರೆ ನಿಮಗೆ ಅದರ ಬದಲಿಗೆ ಕೈತುಂಬಾ ಪರಿಹಾರ ದೊರೆಯುತ್ತದೆ. ಯೋಜನೆಗಳಿಂದ ನೆಲೆ ಕಳೆದುಕೊಳ್ಳುವ ಜನರಿಗೆ ಪುನರ್ವಸತಿ ಕಲ್ಪಿಸಿ ಮರುಸ್ಥಾಪನೆಗೊಳಿಸುವುದು ಮೂಲಭೂತವಾಗಿ ಸರ್ಕಾರದ ಕರ್ತವ್ಯವೇ ಆಗಿದೆ. ಪರಮಾಣು ಶಕ್ತಿ ಸ್ಥಾವರವು ಉತ್ಪಾದನೆ ಪ್ರಾರಂಭಿಸಿದ ನಂತರ, ನಿಮ್ಮ ಹಳ್ಳಿಗೆ ದೊರೆಯುವ ಸಮುದ್ಧಿಯನ್ನು ಕುರಿತು ಸಹಾ ಆಲೋಚಿಸಿ.
School
ಶೇಖರ : ಇಂದು ತೀವ್ರವಾದ ವಿದ್ಯುಚ್ಛಕ್ತಿ ಅಬಾವವಿದೆ ಮತ್ತು ನಿಮಗೆ ಪ್ರತಿದಿನ 5–6 ಗಂಟೆಗಳ ಕಾಲ ಮಾತ್ರ ವಿದ್ಯುಚ್ಛಕ್ತಿ ದೊರೆಯುತ್ತಿದೆ, ಸ್ಥಾವರದ ನಂತರ ನಿಮಗೆ ಹಗಲು–ರಾತ್ರಿ ವಿದ್ಯುಚ್ಛಕ್ತಿ ದೊರೆಯಲಿದೆ. ನಿಮ್ಮ ಮಕ್ಕಳಿಗೆ ಉಚಿತ ಶಾಲಾ ಶಿಕ್ಷಣ ದೊರೆಯಲಿದೆ, ಮತ್ತು ನಿಮ್ಮ ಎಲ್ಲಾ ವೈದ್ಯಕೀಯ ಅಗತ್ಯಗಳು ನಿಮಗೆ ಉಚಿತವಾಗಿ ನೀಡಲ್ಪಡುತ್ತವೆ.
ಶೇಖರ : ಇಷ್ಟು ಮಾತ್ರವಲ್ಲದೇ, ಉತ್ತಮ ರಸ್ತೆಗಳು, ಶುದ್ಧವಾದ ಕುಡಿಯುವ ನೀರು, ಸಮುದಾಯ ಕೇಂದ್ರಗಳ ಸ್ಥಾಪನೆ ಮತ್ತು ಅರ್ಹತೆಗೆ ತಕ್ಕಂತೆ ನೌಕರಿಯ ಅವಕಾಶಗಳು, ಇವೆಲ್ಲವನ್ನೂ ನಿಮಗೆ ಲಭ್ಯಗೊಳಿಸಲಾಗುತ್ತದೆ.
ಶೇಖರ : ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನೀವೆಲ್ಲಾ ಉದ್ಧಾರವಾಗುತ್ತೀರಿ ಮತ್ತು ನಿಮ್ಮ ಹಳ್ಳಿ ಸಮುದ್ಧವಾಗುತ್ತದೆ
(ಜನರ ಗುಂಪು ಈಗ ಹರ್ಷಚಿತ್ತವಾಗಿದೆ...)
ರಾಜು : ಸರಿ, ಸಮೀರ್, ನಾವು ಒಪ್ಪುತ್ತೇವೆ... ಆದರೆ ನನಗೆ ಒಂದು ವಿಷಯ ಹೇಳು, ನಮ್ಮ ಪರಮಾಣು ಶಕ್ತಿ ಸ್ಥಾವರಗಳು ಎಷ್ಟು ಸುರಕ್ಷಿತ, ಅದರಲ್ಲೂ ಸುನಾಮಿಗಳು ಮತ್ತು ಬೂಕಂಪಗಳು ಆದಾಗ ? ಇಂತಹ ಸನ್ನಿವೇಶಗಳಲ್ಲಿ ನಮ್ಮ ಗತಿ ಏನು?


(ಓಹ್ ! ಹೌದು, ನಮ್ಮ ಹಣೆಬರಹ ಏನಾಗುತ್ತದೆ? ಎಲ್ಲರೂ ಗುಸಗುಸ ಮಾತನಾಡತೊಡಗುತ್ತಾರೆ)
ಶೇಖರ : ಎಲ್ಲರೂ ಶಾಂತಿಗೊಳ್ಳಿ ಮತ್ತು ದಯವಿಟ್ಟು ಸುಮ್ಮನಿರಿ. ಒಂದು ರೀತಿಯಲ್ಲಿ ನಿಮ್ಮ ಕಾಳಜಿಗಳು ಮೌಲ್ಯಯುತವಾಗಿವೆ... ಆದರೆ ನಾನು ಸಕಾರಾತ್ಮಕವಾದ ಬಾವನೆಯೊಡನೆ ನಿಮಗೆ ಹೇಳಬಯಸುವುದೇನೆಂದರೆ ನಮ್ಮ ಎಲ್ಲಾ ಪರಮಾಣು ಶಕ್ತಿ ಸ್ಥಾವರಗಳು ಸುರಕ್ಷಿತವಾಗಿವೆ ಮತ್ತು ಸುಭದ್ರವಾಗಿವೆ. ಅನೇಕ ಸ್ತರಗಳಲ್ಲಿ ಪರಿಶೀಲನೆ ಮತ್ತು ತಪಾಸಣೆ ಹೊಂದಿದ ನಂತರವೇ ಅವುಗಳಿಗೆ ಸರ್ಕಾರದ ಅಧಿಕಾರಿಗಳಿಂದ ಒಂದು ಯೋಜನೆಯನ್ನು ಜಾರಿಗೊಳಿಸಲು ಅನುಮತಿ ದೊರೆಯುತ್ತದೆ.
ಶೇಖರ : ಪರಮಾಣು ಶಕ್ತಿ ಸ್ಥಾವರಕ್ಕೆ ಯಾವುದೇ ಸ್ಥಳದ ಪ್ರಸ್ತಾವನೆ ಮಾಡಿದಾಗ, ವಿಶಾಲ ವ್ಯಾಪ್ತಿಯ ಭೌಗೋಳಿಕ ಸಮೀಕ್ಷೆಗಳನ್ನು ಅನೇಕ ವರ್ಷಗಳ ಕಾಲ ಮಾಡಲಾಗುತ್ತದೆ. ಸುನಾಮಿ ಅಥವಾ ಬೂಕಂಪ ಉಂಟಾಗುವ ಅಪರೂಪದ ತಾತ್ವಿಕ ಸಾಧ್ಯತೆ ಇದ್ದರೆ, ಅಲ್ಲಿ ಪರಮಾಣು ಶಕ್ತಿ ಸ್ಥಾವರವನ್ನು ನಿರ್ಮಿಸಲು ಸರ್ಕಾರವು ಅನುಮತಿ ನೀಡುವುದಿಲ್ಲ. ಗುಜರಾತ್‌ನ ಭುಜ್ ಜಿಲ್ಲೆಯಲ್ಲಿ ಬೃಹತ್ ಭೂಕಂಪ ಉಂಟಾದಾಗ ಮತ್ತು ಚೆನ್ನೈಯಲ್ಲಿ ಸುನಾಮಿ ಬಂದಾಗ, ಅಲ್ಲಿರುವ ಪರಮಾಣು ಶಕ್ತಿ ಸ್ಥಾವರಗಳು ಆ ಗಂಭೀರ ಪರಿಸ್ಥಿತಿಯಲ್ಲಿ ಸಹಾ ವಿದ್ಯುಚ್ಛಕ್ತಿಯನ್ನು ಸುರಕ್ಷಿತವಾಗಿ ಉತ್ಪಾದಿಸುವುದನ್ನು ಮುಂದುವರಿಸಿದವು ಮತ್ತು ಬಂಡೆಕಲ್ಲಿನಂತೆ ಅಚಲವಾಗಿ ನಿಂತಿದ್ದವು.
ವೆಂಕಿ : ಆದರೆ ಮಗಾ, ನಮಗೆ ಪರಮಾಣು ಶಕ್ತಿ ಸ್ಥಾವರ ಏಕೆ ಬೇಕು? ನಾವಿಲ್ಲಿ ಚೆನ್ನಾಗಿದ್ದೇವೆ ಮತ್ತು ಸಂತೋಷವಾಗಿದ್ದೇವೆ. ನಮ್ಮ ಜೀವನೋಪಾಯವು ನಮ್ಮ ಕೃಷಿ ಮತ್ತು ಮೀನುಗಾರಿಕೆಯ ಮೇಲೆ ಆಧಾರಗೊಂಡಿದೆ. ನಾವು ವಿದ್ಯುಚ್ಛಕ್ತಿಯ ಬಗ್ಗೆ ಏಕೆ ತಲೆಕೆಡಿಸಿ ಕೊಳ್ಳಬೇಕು ನಾವು ಇದನ್ನೇ ಮಾಡಲು ಇಷ್ಟಪಡೆತ್ತೇವೆ?
ಶೇಖರ : ಹೌದು, ಮಗಾ, ನಮ್ಮ ತಂದೆಯರು ಮತ್ತು ಪೂರ್ವಜರು ಸಹಾ ಇದೇ ವತ್ತಿಯಲ್ಲಿದ್ದರು ಮತ್ತು ನಾವು ಸಹಾ ಅದನ್ನೇ ಆನಂದಿಸುತ್ತಿದ್ದೇವೆ ಮತ್ತು ನಮ್ಮ ಮಕ್ಕಳನ್ನು ಅನೇಕ ತಲೆಮಾರುಗಳಿಂದ ಇದೇ ರೀತಿಯಾಗಿ ಬೆಳೆಸುತ್ತಿದ್ದೇವೆ. ನಾವು ಪರಮಾಣು ಶಕ್ತಿ ಇಲ್ಲದೇ ಚೆನ್ನಾಗಿಯೇ ಇದ್ದೇವಲ್ಲ! ಇದರಿಂದ ನಮಗೇನು ಪ್ರಯೋಜನ?
ಮಿಸ್ರಿ :ಹೌದು, ಖಂಡಿತವಾಗಿ... ನಾವು ಉತ್ತಮ ಜೀವನವನ್ನೇ ಬಾಳುತ್ತಿದ್ದೇವಲ್ಲ
ಪಾರ್ವತಿ : ಹೌದು, ನಾವು ನಮ್ಮ ಅಗತ್ಯಗಳನ್ನು ಚೆನ್ನಾಗಿಯೇ ಪೂರೈಸಿಕೊಳ್ಳುತ್ತಿದ್ದೇವೆ, ಆಹಾರ, ಬಟ್ಟೆಗಳು ಇತ್ಯಾದಿಗಳನ್ನು ಪಡೆದುಕೊಳ್ಳುತ್ತಿದ್ದೇವೆ. ನಮಗೆ ಇನ್ನೇನು ತಾನೇ ಬೇಕು?


ಶೇಖರ : ವಾಹ್ ಚೆನ್ನಾಗಿ ಹೇಳಿದಿರಿ... ಆದರೆ ನೀವು ಆಲೋಚಿಸುತ್ತಿರುವಂತೆ ಪ್ರತಿಯೊಬ್ಬರೂ ಆಲೋಚಿಸಲು ಪ್ರಾರಂಭಿಸಿದರೆ ನಮ್ಮ ದೇಶವು 60 ವರ್ಷಗಳ ಹಿಂದೆ ಇದ್ದಂತೆಯೇ ಉಳಿಯುತ್ತದೆ. ಇಂದು, ಸ್ವಾತಂತ್ರ್ಯ ಬಂದು 60 ವರ್ಷಗಳು ಕಳೆದ ನಂತರ ಭಾರತವು ವಿಶ್ವದ ಕೆಲವೇ ಆಯ್ದ ದೇಶಗಳ ಸಾಲಿನಲ್ಲಿ ಗೌರವಯುತವಾಗಿ ನಿಂತಿದೆ. ಎಲ್ಲಾ ಜನರು ನಿಮ್ಮ ಪೂರ್ವಜರಂತೆಯೇ ಹಳ್ಳಿಗಲ್ಲಲೇ ಇದ್ದು, ವ್ಯವಸಾಯ ಮತ್ತು ಮೀನುಗಾರಿಕೆಗಳನ್ನು ಮಾತ್ರ ಮಾಡಿಕೊಂಡಿದ್ದರೆ, ನಮ್ಮ ದೇಶದಲ್ಲಿ, ಇಂಜಿನಿಯರ್‌ಗಳು, ವಿಜ್ಞಾನಿಗಳು, ಕ್ರೀಡಾ ಪಟುಗಳು ಮತ್ತು ಕೈಗಾರಿಕೋದ್ಯಮಿಗಳು ಆಗಲು ಸಾಧ್ಯವಾಗುತ್ತಿತ್ತೇ ಎಂದು ಕಲ್ಪನೆ ಮಾಡಿಕೊಳ್ಳಿ.
ಶೇಖರ : ನೀವು ಖಾಯಿಲೆ ಬಿದ್ದರೆ ನಿಮಗೆ ಯಾರು ಚಿಕಿತ್ಸೆ ನೀಡುತ್ತಾರೆ? ಯಾರು ನಿಮ್ಮ ದೈನಂದಿನ ಅಗತ್ಯಗಳಿಗಾಗಿ ಅನ್ವೇಷಿಸಿ , ಪದಾರ್ಥಗಳನ್ನು ಉತ್ಪಾದಿಸುತ್ತಾರೆ? ಯಾರು ಸಂಶೋಧನೆ ಮಾಡುತ್ತಾರೆ ಮತ್ತು ಹೊಸ ವಸ್ತುಗಳ ಆವಿಷ್ಕಾರ ಮಾಡುತ್ತಾರೆ? ಸ್ವಾತಂತ್ರ್ಯ ಬಂದ 60 ವರ್ಷಗಳ ನಂತರ ಸಹಾ ನಿಮ್ಮ ಮನಃಸ್ಥಿತಿಯಲ್ಲಿ ಬದಲಾವಣೆ ಇಲ್ಲವೆನ್ನುವುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಕ್ಷಮಿಸಿ , ನೀವೆಲ್ಲರೂ ಇನ್ನೂ ಅಜ್ಞಾನ ಮತ್ತು ಮೂಢನಂಬಿಕೆಗಳ ಸಂಕೋಲೆಯಲ್ಲಿ ಸಿಕ್ಕಿಹಾಕಿ ಕೊಂಡಿದ್ದೀರಿ.
ಶೇಖರ : ರಾಜು ಅಂಕಲ್, ನಮ್ಮ ದೇಶದ ಆರ್ಥಿಕ ಬೆಳವಣಿಗೆ ಮತ್ತು ಸಮಗ್ರ ಅಭಿವದ್ಧಿ ಅತ್ಯಗತ್ಯವಾಗಿದೆ, ಅದಕ್ಕೆ ವಿದ್ಯುಚ್ಛಕ್ತಿಯ ಅಗತ್ಯವಿದೆ. ಒಂದು ದೇಶವು ಅಭಿವದ್ಧಿ ಪಡೆಯಬೇಕಾದರೆ ಸಾಕಷ್ಟು ವಿದ್ಯುಚ್ಛಕ್ತಿ ಇರಬೇಕು. ಆದುದರಿಂದ ನಿಮ್ಮ ಹಳ್ಳಿಗೆ ವಿದ್ಯುಚ್ಛಕ್ತಿ ಬಂದಾಗ ನಿಮ್ಮ ಕೊಳವೆ ಬಾವಿಗಳು ನಿಮ್ಮ ಜಮೀನಿಗೆ ನೀರನ್ನು ಒದಗಿಸಬಲ್ಲವು, ನೀವು ಉಪಕರಣಗಳನ್ನು ಬಳಸಬಹುದು ಮತ್ತು ಅತ್ಯುನ್ನತ ಮಟ್ಟದ ಬೀಜಗಳನ್ನು ಬಿತ್ತಲು ಟ್ರಾಕ್ಟರ್ ಬಳಸಬಹುದು, ನಿಮ್ಮ ಬೆಳೆಗಳು 10–ಪಟ್ಟು ಹೆಚ್ಚು ಇಳುವರಿ ನೀಡಬಲ್ಲವು, ಆದರಿಂದ ನಿಮ್ಮ ಜೀವನ ಮಟ್ಟವು ಖಂಡಿತವಾಗಿ ವರ್ಧನೆಯಾಗುತ್ತದೆ.
(ಎಲ್ಲರೂ ಪರಸ್ಪರರತ್ತ ಅಪನಂಬಿಕೆಯಿಂದ ನೋಡಿಕೊಳ್ಳುತ್ತಾರೆ)


ಶೇಖರ : ಪಾರ್ವತಿ ಆಂಟಿ, ಬರೀ ಆಗತ್ಯಗಳನ್ನು ಪೂರೈಸಿಕೊಳ್ಳುವುದು ಸಾಲದು. ಇಂದು ನಿಮ್ಮ ಮಕ್ಕಳು ಶಾಲೆಗೆ ಹೋಗುತ್ತಿಲ್ಲ, ಅವರಿಗೆ ಸರಿಯಾದ ವಿದ್ಯಾಬ್ಯಾ್ಯಸ ದೊರೆಯುತ್ತಿಲ್ಲ, ಅವರಿಗೆ ಪೌಷ್ಠಿಕ ಆಹಾರ ಸಹಾ ದೊರೆಯುತ್ತಿಲ್ಲ, ಗಂಭೀರ ಅಸೌಖ್ಯತೆಯ ಸನ್ನಿವೇಶದಲ್ಲಿ ಅವರಿಗೆ ನಿಜವಾದ ಅರ್ಹತೆ ಪಡೆದಿರುವ ವೈದ್ಯರಿಂದ ಸೂಕ್ತ ವೈದ್ಯಕೀಯ ಚಿಕಿತ್ಸೆ ದೊರೆಯುತ್ತಿಲ್ಲ. ನೀವು ಎಷ್ಟುಕಾಲ ಖೊಟ್ಟಿ ವೈದ್ಯರು ಮತ್ತು ವಂಚಕ ಬಾಬಾಗಳಲ್ಲಿ ಕುರುಡು ನಂಬಿಕೆಯನ್ನು ಇಟ್ಟುಕೊಳ್ಳುತ್ತೀರಿ? ನೀವು ಯಾವಾಗ ಕಣ್ಣು ತೆರೆಯುತ್ತೀರಿ? ನಿಮ್ಮ ಹಳ್ಳಿಗೆ ಸಮದ್ಧಿ ಬಂದಾಗ ಮಾತ್ರ ನಿಮ್ಮ ಮಕ್ಕಳಿಗೆ ಸಂತೃಪ್ತ ಜೀವನ ದೊರೆಯುತ್ತದೆ. ಕಲ್ಪನೆ ಮಾಡಿಕೊಳ್ಳಿ , ನಿಮ್ಮ ಮಕ್ಕಳು ಸುಪ್ರಸಿದ್ಧ ವಿಜ್ಞಾನಿಗಳು, ಇಂಜನಿಯರ್‌ಗಳು ಮತ್ತು ವೈದ್ಯರಾಗಬಹುದು ! ನಿಮಗೆ ದೊರೆಯಬಲ್ಲ ಆನಂದ ಮತ್ತು ನಿಮ್ಮ ಹಳ್ಳಿಯು ಹೊಂದಬಲ್ಲ ಪ್ರಸಿದ್ಧಿಯ ಬಗ್ಗೆ ಆಲೋಚಿಸಿ.
ಶೇಖರ : ಮತ್ತು, ಮಿಸ್ರಿ ಆಂಟಿ, ನೀವು ನಿಮ್ಮ ಗುಡಿಸಿಲಿನಲ್ಲಿ ಬಾಳುವುದನ್ನು ಸಂತೋಷವಾಗಿ ಮುಂದುವರಿಸಬಹುದು. ಆದರೆ ನಿಮ್ಮ ಮಕ್ಕಳಿಂದ ಅದನ್ನು ನಿರೀಕ್ಷಿಸಬೇಡಿ. ನೀವು 60 ವರ್ಷಗಳಿಂದ ಅದೇ ಸಾಂಪ್ರದಾಯಿಕ ಆಲೋಚನೆಗಳಲ್ಲಿ ಸಿಲುಕಿಕೊಂಡಿದ್ದೀರಿ. ಆದರೆ ನಮ್ಮ ದೇಶವು ಹೇಗೆ ಸುಭಿಕ್ಷವಾಗಿದೆ ಮತ್ತು ಪ್ರಗತಿ ಹೊಂದಿದೆ ಎನ್ನುವುದನ್ನು ಒಂದು ಬಾರಿ ನೋಡಿ. ಭಾರತವು ವಿಶ್ವವಿಖ್ಯಾತ ವಿಜ್ಞಾನಿಗಳು, ಇಂಜನಿಯರ್‌ಗಳನ್ನು, ಕ್ರೀಡಾ ವ್ಯಕ್ತಿತ್ವಗಳನ್ನು, ಕೈಗಾರಿಕೋದ್ಯಮಿಗಳನ್ನು–ನಮ್ಮ ದೇಶಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆಯನ್ನು ತಂದಿರುವವರನ್ನು ಉತ್ಪಾದಿಸಿದೆ... ಮತ್ತು ನಿಮ್ಮ ಕಡೆ ನೋಡಿಕೊಳ್ಳಿ... ಭೂತಕಾಲದ ನಂಬಿಕೆಗಳಲ್ಲಿ ಸಿಲುಕಿಕೊಂಡಿದ್ದೀರಿ !
ಶೇಖರ : ಅವರು ಸಹಾ ನಿಮ್ಮಂತೆಯೇ ಆಲೋಚಿಸಿದ್ದರೆ, ಇಂದು ನಮ್ಮ ದೇಶ ಯಾವ ಸ್ಥಿತಿಯಲ್ಲಿ ಇರುತ್ತಿತ್ತು. ನನ್ನ ತಾಯಿ–ತಂದೆಯರು ನನ್ನನ್ನು ನಗರಕ್ಕೆ ಶಿಕ್ಷಣಕ್ಕಾಗಿ ಕಳಿಸದಿದ್ದರೆ, ಬಹುಶಃ ನಾನು ಸಹಾ ಅನಕ್ಷರಸ್ಥ ವ್ಯಕ್ತಿಯಾಗಿ ಉಳಿದು ಹಳ್ಳಿಯಲ್ಲಿ ಅತ್ತಲಿಂದಿತ್ತ ಅಲೆದಾಡುತ್ತಿದ್ದೆ.
ಶೇಖರ : ಮತ್ತೊಂದು ಮುಖ್ಯ ವಿಷಯ : ನಿಮಗೆ ಅಭಿವದ್ಧಿ ಬೇಕಾದರೆ... ನಿಮಗೆ ವಿದ್ಯುಚ್ಛಕ್ತಿ ಬೇಕಾಗುತ್ತದೆ... ವಿದ್ಯುಚ್ಛಕ್ತಿಯ ಹೆಚ್ಚಿನ ಉತ್ಪಾದನೆ ಆದಷ್ಟು ವ್ಯವಸಾಯ ಮತ್ತು ಕಾರ್ಖಾನೆಗಳು ಹೆಚ್ಚುತ್ತವೆ. ಆಗ ಮಾತ್ರ ಹಳ್ಳಿಯ ಪ್ರಗತಿಯಾಗುತ್ತದೆ ಮತ್ತು ನಮ್ಮ ದೇಶವು ಸಮದ್ಧಗೊಳ್ಳುತ್ತದೆ. ಈಗ ನಾನು ನಿಮಗೆ ವಿಜ್ಞಾನ ಮತ್ತು ಮೂಢನಂಬಿಕೆಗಳ ನಡುವೆ ಆಯ್ಕೆ ಮಾಡಿಕೊಳ್ಳುವ ನಿರ್ಧಾರವನ್ನು ನಿಮ್ಮ ಮೇಲೆ ಬಿಡುತ್ತೇನೆ. ಏನು ಮಾಡಬೇಕೆನ್ನುವುದನ್ನು ನೀವೆಲ್ಲ ಸೇರಿ ಆಲೋಚಿಸಿ.


ಶೇಖರ : ನಿಮಗೆ ಗೊತ್ತೇ ಮಿಸ್ರಿ ಆಂಟಿ, ನಾವು ಇಲ್ಲಿ ಪರಮಾಣು ಶಕ್ತಿ, ವಿಕಿರಣ ಇತ್ಯಾದಿಗಳ ಕುರಿತು ವಿಮರ್ಶೆ ಮಾಡುತ್ತಾ ಕುಳಿತಿದ್ದರೆ, ನಮ್ಮ ಎಂಜಿನಿಯರ್ ಮತ್ತು ಅಧಿಕಾರಿಗಳು ಅವರ ಕುಟುಂಬದೊಂದಿಗೆ ದೀರ್ಘಕಾಲ, ಆರೋಗ್ಯಕರವಾಗಿ ವಾಸಿಸುತ್ತಿದ್ದಾರೆ ಹಾಗೂ ದೇಶದ ಅಭಿವೃದ್ಧಿ ಮತ್ತು ಪ್ರಗತಿಗಾಗಿ ಕೊಡುಗೆ ನೀಡುತ್ತಿದ್ದಾರೆ.
ರಾಜು : ಹೌದು ಸಮೀರ್, ನೀನು ಹೇಳುತ್ತಿರುವುದು ಸ್ವಲ್ಪ ಸರಿಯಾಗಿದೆ. ನಮ್ಮೆಲ್ಲಾ ಅನುಮಾನಗಳೂ ಪರಿಹಾರವಾಗಿವೆ. ನೀನು ನಮ್ಮನ್ನು ಹಿಂದಿನ ಕಾಲದ ಆಲೋಚನೆಗಳು, ಅಜ್ಞಾನ ಮತ್ತು ಮೂಢನಂಬಿಕೆಗಳಿಂದ ಹೊರತಂದಿರುವುದಷ್ಟೇ ಅಲ್ಲ, ನಮ್ಮ ಮನೋಭಾವವನ್ನು ಬದಲಾಯಿಸಿಕೊಳ್ಳಲು ಸೂಕ್ತ ಮಾಹಿತಿಯನ್ನು ನೀಡಿ ಉತ್ತೇಜಿಸಿದ್ದೀಯ. ಈಗ ನಾವೆಲ್ಲಾ ಅದಕ್ಕೆ ಸಿದ್ಧರಾಗಿದ್ದೇವೆ.
ಶೇಖರ : ಮತ್ತೊಂದು ವಿಷಯ. ನಿಮಗೆ ಯಾರಾದರೂ ದುಷ್ಟರು ಪರಮಾಣು ಶಕ್ತಿಯ ವಿರುದ್ಧ ನಿಮ್ಮನ್ನು ದಾರಿ ತಪ್ಪಿಸಲು ಯತ್ನಿಸಿದರೆ ದಯವಿಟ್ಟು ಅಂತಹ ದುಷ್ಟರು ಹಾಗೂ ಅಸಹಜ ವಿಷಯಗಳನ್ನು ನಂಬಬೇಡಿ. ನೀವು ಅವರ ಬಲೆಯಲ್ಲಿ ಬೀಳಬೇಡಿ. ನಿಮಗೆ ಈಗ ಸರಿಯಾಗಿ ಅರ್ಥವಾಗಿದೆ ಎಂದುಕೊಂಡಿದ್ದೇನೆ, ಹೌದಾ?
ರಾಜು : ಈಗ, ನಮಗೆಲ್ಲಾ ವಾಸ್ತವ ತಿಳಿಯಿತು. ಮಗೂ, ನೀನು ಪ್ರಶಂಸನೀಯ ರೀತಿಯಲ್ಲಿ ನಮ್ಮೆಲ್ಲಾ ಕಲ್ಪನೆ, ಮೂಢನಂಬಿಕೆ ಮತ್ತು ತಪ್ಪುತಿಳುವಳಿಕೆಯನ್ನು ನಿವಾರಿಸಿ ನಮ್ಮ ಕಣ್ಣು ತೆರೆಸಿದೆ ಮತ್ತು ನಾವು ನಮ್ಮ ದೇಶದ ಏಳಿಗೆಗಾಗಿ ಖಂಡಿತವಾಗಿಯೂ ಏನನ್ನಾದರೂ ಕೊಡುಗೆ ನೀಡಬೇಕೆನ್ನಿಸುವಂತೆ ಮಾಡಿದೆ. ನಾವೆಲ್ಲಾ ನಮ್ಮ ಹಳ್ಳಿ ಮತ್ತು ದೇಶವನ್ನು ಅಭಿವದ್ಧಿಪಡಿಸಿ, ಇದರ ಏಳಿಗೆಯಲ್ಲಿ ಪಾಲುದಾರರಾಗುತ್ತೇವೆ.
ಶೇಖರ : ಕೊನೆಯದಾಗಿ ಮತ್ತೊಂದು ವಿಷಯ ಸ್ವಚ್ಛ ಹಾಗೂ ಹಸುರಿನಿಂದ ಕೂಡಿದ ಪರಮಾಣು ಶಕ್ತಿ ಸ್ಥಾವರದ ಕಾರಣದಿಂದ ಈ ಸ್ಟೇಷನ್‌ಗಳು ಸುಂದರ ಮನೆಗಳಾಗುತ್ತವೆ ಹಾಗೂ ಅನೇಕ ಗಿಡಗಳು ಮತ್ತು ಪ್ರಾಣಿಗಳೂ ಸೇರಿದಂತೆ ಲೆಕ್ಕವಿಲ್ಲದಷ್ಟು ಪಕ್ಷಿಗಳು ಮತ್ತು ಚಿಟ್ಟೆಗಳಿಗೆ ಆಶ್ರಯತಾಣವಾಗಿವೆ ಎಂದು ತಿಳಿದರೆ ನಿಮಗೆ ಆಶ್ಚರ್ಯವಾಗುತ್ತದೆ.




ಹೀಗೆ ರಾಜು ಮತ್ತು ಇತರ ಗ್ರಾಮಸ್ಥರು ಪರಮಾಣು ಶಕ್ತಿ ಸ್ಥಾವರವನ್ನು ಭೇಟಿಮಾಡಲು ನಿರ್ಧರಿಸಿದರು.

ರಾಜು ಮತ್ತು ಅವನ ಸ್ನೇಹಿತರು ಪರಮಾಣು ಶಕ್ತಿ ಸ್ಥಾವರಕ್ಕೆ ಪ್ರವಾಸ ಮಾಡಿದಾಗ ಏನಾಯಿತು ? ಅವರು ತಮ್ಮ ಪ್ರವಾಸವನ್ನು ಹೇಗೆ ಆನಂದಿಸಿದರು ?

ಅವರು ಅಲ್ಲಿ ಏನನ್ನು ಗಮನಿಸಿದರು ?

ಹೆಚ್ಚು ತಿಳಿಯಲು, ಮುಂದೆ ಬರುವ ಸಂಚಿಕೆಯನ್ನು ಪಡೆದುಕೊಳ್ಳಿ...

**“ಪರಮಾಣು ಶಕ್ತಿ... ದೇಶದ ಶಕ್ತಿ**
**ಸ್ವಚ್ಛ ಶಕ್ತಿ... ಸ್ವಚ್ಛ ಭಾರತ”**

# ರಾಜು ಪ್ರವಾಸ

ಪರಮಾಣು ಶಕ್ತಿ ಸ್ಥಾವರಕ್ಕೆ ಪ್ರಯಾಣ ಮಾಡಿದ ಕಥೆ.

ಮುಂದುವರೆಯುತ್ತದೆ....



एनपीसीआईएल
NPCIL

ಸಾರ್ವಜನಿಕ ಹಿತದೃಷ್ಟಿಯಿಂದ ನೀಡಲಾಗಿದೆ

**ನ್ಯೂಕ್ಲಿಯರ್ ಪವರ್ ಕಾರ್ಪೊರೇಶನ್ ಆಫ್ ಇಂಡಿಯಾ**

(ಭಾರತ ಸರ್ಕಾರದ ಒಂದು ಸಂಸ್ಥೆ

ಪ್ರಕಾಶಕರು:

ಡೈರೆಕ್ಟೊರೇಟ್ ಆಫ್ ಕಾರ್ಪೊರೇಟ್ ಪ್ಲಾನಿಂಗ್ ಮತ್ತು ಕಾರ್ಪೊರೇಟ್ ಕಮ್ಯೂನಿಕೇಶನ್ಸ್ (ಸಿಪಿ ಮತ್ತು ಸಿಸಿ)

6-S-14, ವಿಕ್ರಮ್ ಸಾರಾಭಾಯ್ ಭವನ್ ಅಣುಶಕ್ತಿ ನಗರ್, ಮುಂಬೈ - 400094

ಇ–ಮೈಲ್: cpcc@npcil.co.in | ವೆಬ್‌ಸೈಟ್: www.npcil.nic.in